# ರಾಮಾಯಣದ ಎರಡು ತಿರುವು

ಆದಿಕಾವ್ಯವೆಂದು ಭಾವಿಸಲಾಗಿರುವ 'ರಾಮಾಯಣ' ಆಧುನಿಕ ಕಾಲಕ್ಕೂ ಪ್ರಸ್ತುತವೆನ್ನಿಸಲು ಕಾರಣ ಅದು ನಮ್ಮೆದುರು ಅನಾವರಣಗೊಳಿಸುವ ಮನುಷ್ಯ ಸ್ವಭಾವದ ವೈವಿಧ್ಯ, ವೈಚಿತ್ರ್ಯಗಳು. ಮನುಷ್ಯನ ವರ್ತನೆ ಕಾಲದಿಂದ ಕಾಲಕ್ಕೆ ಬದಲಾಗಬಹುದು; ಆದರೆ ಸ್ವಭಾವ ಮಾತ್ರ ಬಹುಮಟ್ಟಿಗೆ ಸ್ಥಿರ. ಮನುಷ್ಯನಲ್ಲಿರುವ ಸ್ವಾರ್ಥ, ಲೋಭ, ಕ್ರೌರ್ಯ, ಕಾಮ, ಮೋಹ– ಇತ್ಯಾದಿಗಳು ತ್ರೇತಾಯುಗದಲ್ಲಿ ವಿಜೃಂಭಿಸುತ್ತಿದ್ದಂತೆಯೇ ಇಂದಿಗೂ, ಮುಂದೆಯೂ ಮುಂದುವರೆಯುತ್ತವೆ ಎಂಬುದು ಸುಳ್ಳಲ್ಲ. ಅವುಗಳಿಂದಾಗಿ ವ್ಯಕ್ತಿಗಳ ಬದುಕಿನಲ್ಲಿ ಮಾತ್ರವಲ್ಲ, ಸಮುದಾಯ ಜೀವನದಲ್ಲೂ ಅನಿರೀಕ್ಷಿತ ಏರಿಳಿತಗಳು ಕಾಣಿಸಿಕೊಳ್ಳುವುದೂ ಅಷ್ಟೇ ಸತ್ಯ. 'ರಾಮಾಯಣ', 'ಮಹಾಭಾರತ'ಗಳಂಥ ಕಾವ್ಯಗಳು ಈ ಸತ್ಯವನ್ನು ಮತ್ತೆ ಮತ್ತೆ ನಮ್ಮ ಗಮನಕ್ಕೆ ತರುತ್ತವೆ.

ರಾಮಾಯಣದ ಕಥೆಯಲ್ಲಿ ಎರಡು ಮುಖ್ಯ ತಿರುವುಗಳಿವೆ, ಅವಿಲ್ಲದಿದ್ದಲ್ಲಿ ರಾಮಾಯಣ ಒಂದು ಮಹಾಕಾವ್ಯ ಎನ್ನಿಸಿಕೊಳ್ಳದೆ, ಕೇವಲ ಸಾಧಾರಣ ಕಥೆಯೊಂದೆನ್ನಿಸಿಕೊಂಡು, ವಿಸ್ಮೃತಿಗೆ ಒಳಗಾಗುತ್ತಿತ್ತು. ಮೊದಲನೆಯ ತಿರುವು ಕಾಣಿಸಿಕೊಳ್ಳುವುದು ಅಯೋಧ್ಯಾ ಕಾಂಡದಲ್ಲಿ, ಅಯೋಧ್ಯೆಯಲ್ಲಿ ಸಂಭ್ರಮ ಸಮೃದ್ಧಿಗಳು ತುಂಬಿ ತುಳುಕುತ್ತಿದ್ದ ಕಾಲ. ರಾಜನಾದ ದಶರಥ ಕೌಟುಂಬಿಕ ಜೀವನದಲ್ಲಿ ಅತ್ಯಂತ ಸಂತೃಪ್ತನಾಗಿದ್ದಾನೆ. ಗುಣಶಾಲಿಗಳೂ ಸಮರ್ಥರೂ ಆಗಿರುವ ನಾಲ್ಕು ಮಂದಿ ಮಕ್ಕಳೂ ವಿವಾಹಿತರಾಗಿ, ಸೀತೆಯಂಥ ಸೊಸೆಯಂದಿರು ಮನೆ ತುಂಬಿದ್ದಾರೆ. ಅರಮನೆಯಲ್ಲಿ ಮಾತ್ರವಲ್ಲ, ಇಡಿಯ ಕೋಸಲ ನಾಡಿನಲ್ಲಿಯೇ ಹಿಗ್ಗು, ಉಲ್ಲಾಸ, ಜೀವನೋತ್ಸಾಹ ಉಕ್ಕಿ ಹರಿಯುತ್ತಿದೆ. ಇಂಥ ಸಂತೋಷದ ಉತ್ಕಟತೆಯಲ್ಲಿ ದಶರಥನ ಮನಸ್ಸಿನಲ್ಲಿ ಹಿರಿಯ ಮಗ ರಾಮನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ, ತಾನು ಆಡಳಿತದಿಂದ ನಿವೃತ್ತನಾಗಬೇಕೆನ್ನುವ ಯೋಚನೆ ಬಂದುದು ಅತ್ಯಂತ ಸಹಜ. ರಾಮನ ಆದರ್ಶ ಗುಣಗಳನ್ನು ಮನಗಂಡಿದ್ದ ಕೋಸಲ ದೇಶದ ಪ್ರಜೆಗಳಿಗೆ ದಶರಥನ ನಿರ್ಧಾರವನ್ನು ಕೇಳಿ ಸಂಭ್ರಮವೋ ಸಂಭ್ರಮ, ಈ ಘಟ್ಟದಲ್ಲಿ ಮಂಥರೆಯ ಪ್ರವೇಶವಾಗುತ್ತದೆ. ಆಕೆ ಶರೀರದಲ್ಲಿ ಕುಬ್ಜೆಯಾಗಿರುವಂತೆ ಸ್ವಭಾವದಲ್ಲಿಯೂ ಕುಬ್ಜೆ. ಆಕೆಯದು ವಿಕೃತ ಮನಸ್ಸು. ರಾಮನ ಬದಲು ಕೈಕೇಯಿಯ ಮಗ ಭರತ ರಾಜನಾದರೆ, ತಾನು ರಾಜಮಾತೆಯ ಆಪ್ತಳಾಗುವ ಪ್ರತಿಷ್ಠೆಯನ್ನು ಗಳಿಸಬೇಕೆಂಬ ಸ್ವಾರ್ಥ ಅವಳದು. ಅದರಿಂದಾಗಿ ಕೈಕೇಯಿಯ ನಿರ್ಮಲ ಮನಸ್ಸಿನಲ್ಲಿ ಸ್ವಾರ್ಥದ ಅಸೂಯೆಯ ಹುಳಿ ಹಿಂಡುತ್ತಾಳೆ ಆಕೆ.

ಪರಿಣಾಮವಾಗಿ, ಶ್ರೀರಾಮ ಸೀತಾ ಲಕ್ಷ್ಮಣರೊಡನೆ ಹದಿನಾಲ್ಕು ವರ್ಷ ಕಾಡಿನಲ್ಲಿ ಅಲೆಯುವಂತಾಗುತ್ತದೆ; ದಶರಥ ಕೊನೆಯುಸಿರೆಳೆಯುತ್ತಾನೆ. ಇಡಿಯ ಕೋಸಲ ದೇಶಕ್ಕೆ ಸೂತಕ ಆವರಿಸಿಕೊಳ್ಳುತ್ತದೆ. ಮಂಥರೆಯೊಬ್ಬಳಿಂದಾಗಿ ಸಂತಸದ ಅಲೆಗಳು ದುಃಖದ ಸುನಾಮಿ ಅಲೆಗಳಾಗಿ ಬದಲಾಗುತ್ತವೆ.

ಸೀತಾರಾಮ ಲಕ್ಷ್ಮಣರ ವನವಾಸವಾದರೂ ನೆಮ್ಮದಿಯಿಂದ ಮುಗಿಯಿತೆ? ಅದರಲ್ಲೂ ಮತ್ತೊಂದು ಹಠಾತ್ ತಿರುವು ಕಾಣಿಸಿಕೊಳ್ಳುತ್ತದೆ. ಕಾಡಿನ ಜೀವನಕ್ಕೆ ಒಗ್ಗಿಕೊಂಡ ಅವರು ನಿಸರ್ಗದ ಚೆಲುವಿನ ಸಾನ್ನಿಧ್ಯದಲ್ಲಿ, ತಪಸ್ವಿಗಳ ಸಹವಾಸದಲ್ಲಿ ಸುಖವನ್ನು ಕಂಡುಕೊಳ್ಳುತ್ತಾರೆ; ಪಂಚವಟಿಯ ಸುಂದರ ಪರಿಸರದಲ್ಲಿ, ಗೋದಾವರೀ ತೀರದಲ್ಲಿ ಪರ್ಣಶಾಲೆಯನ್ನು ಕಟ್ಟಿಕೊಂಡು, ಸಾತ್ವಿಕ ಜೀವನವನ್ನು ನಡೆಸುತ್ತಿದ್ದಾರೆ, ಇಂಥ ಸಂದರ್ಭದಲ್ಲಿಯೇ ಮಾರೀಚ ಚಿನ್ನದ ಜಿಂಕೆಯ ರೂಪದಲ್ಲಿ ಸೀತೆಯ ಮುಂದೆ ಸುಳಿಯುತ್ತಾ, ಆಕೆಯಲ್ಲಿ ಪ್ರಲೋಭನೆಯನ್ನು ಪ್ರಚೋದಿಸುವುದು. ಸೀತೆಯ ಬಯಕೆಯನ್ನು ಪೂರೈಸಲು– ಲಕ್ಷ್ಮಣನ ಮಾತನ್ನೂ ಲೆಕ್ಕಿಸದೇ ರಾಮ ಜಿಂಕೆಯನ್ನು ಪಡೆಯಲು ಅದನ್ನು ಹಿಂಬಾಲಿಸುತ್ತಾನೆ. ಅದು ಕೈಗೆ ಸಿಗದಿದ್ದಾಗ ಬಾಣ ಪ್ರಯೋಗ ಮಾಡುತ್ತಾನೆ. ರಾಮನ ಬಾಣ ತಗುಲಿ ಸಾಯುವ ಸಂದರ್ಭದಲ್ಲಿ ಮಾರೀಚ ಸೀತೆ ಹಾಗೂ ಲಕ್ಷ್ಮಣರನ್ನು– ರಾಮನ ಧ್ವನಿಯನ್ನು ಅನುಕರಿಸಿ– ಕೂಗುತ್ತಾನೆ. ಸೀತೆಯ ಒತ್ತಾಯಕ್ಕೆ ಮಣಿದು ಲಕ್ಷ್ಮಣ ರಾಮನ ಸಹಾಯಕ್ಕೆ ಹೋಗಬೇಕಾಗುತ್ತದೆ. ರಾಮ ಲಕ್ಷ್ಮಣರ ಅನುಪಸ್ಥಿತಿಯಲ್ಲಿ ರಾವಣನಿಂದ ಸೀತಾಪಹರಣವಾಗುತ್ತದೆ. ವನವಾಸ ಮುಗಿಸಿ, ಇನ್ನೇನು ಕೆಲವೇ ದಿನಗಳಲ್ಲಿ ಅಯೋಧ್ಯೆಗೆ ಹಿಂದಿರುಗಿ, ಬಂಧುಗಳನ್ನು ಆತ್ಮೀಯರನ್ನು ಕಾಣುವ ಕನಸು ಕಾಣುತ್ತಿದ್ದ ಸೀತಾರಾಮ ಲಕ್ಷ್ಮಣರ ಬದುಕಿನಲ್ಲಿ ಮಾರೀಚನಿಂದಾಗಿ ಒಂದು ಅನಿರೀಕ್ಷಿತ ಪುಟ ತೆರೆದುಕೊಳ್ಳುತ್ತದೆ.

ಈ ಎರಡೂ ಸಂದರ್ಭಗಳಲ್ಲಿ ಮನುಷ್ಯ ವಿವೇಕ ಹಾಗೂ ವಿವೇಚನಾ ಸಾಮರ್ಥ್ಯವನ್ನು ಕಳೆದುಕೊಂಡಾಗ ಬಂದೆರಗುವ ಅನಾಹುತ ಪರಂಪರೆಗಳನ್ನು ಕಾಣುತ್ತೇವೆ. ಮೊದಲ ಸಂದರ್ಭದಲ್ಲಿ ಮಂಥರೆಯ ದುರ್ಬೋಧನೆಯಿಂದ ಚೋದಿತಳಾದ ಕೈಕೇಯಿಯ ಸ್ವಾರ್ಥ, ಸ್ತ್ರೀ ವ್ಯಾಮೋಹದಿಂದಾಗಿ ಅದನ್ನು ಪ್ರತಿಭಟಿಸಲಾರದ ದಶರಥನ ಹೇಡಿತನ– ಇವುಗಳಿಂದಾಗಿ ಒಂದು ಸುಂದರ ಕನಸು ಭಗ್ನಗೊಳ್ಳುತ್ತದೆ. ಎರಡನೆಯ ಸಂದರ್ಭದಲ್ಲಿ ಸೀತೆಯಲ್ಲಿನ ಭ್ರಾಂತಿ ಜನ್ಯ ಮೋಹ ಶ್ರೀರಾಮನಿಗೂ ತಗುಲಿ ಆತ ವಿವೇಚನೆಯನ್ನು ಕಳೆದುಕೊಳ್ಳುವಂತಾಗುತ್ತದೆ.

ಹೀಗೆ ಎಲ್ಲ ಕಾಲದಲ್ಲೂ ಎಲ್ಲರ ಬದುಕಿನಲ್ಲೂ ದಾಖಲಾಗದಿರುವ ಇಂಥ ಎಷ್ಟೋ 'ರಾಮಾಯಣ'ಗಳು ಘಟಿಸುತ್ತಲೇ ಇರುತ್ತವೆ!

■ ವೈನತೇಯ

## ಮಾತೇ ಮುತ್ತು

★ ಎದುರಿಗೆ ಒಳ್ಳೆಯ ಮಾತನ್ನಾಡುತ್ತಾ ಮರೆಯಲ್ಲಿ ಕೆಲಸ ಕೆಡಿಸುವ ಮಿತ್ರನು, ಮೇಲೆ ಹಾಲಿರುವ ಒಳಗೆ ವಿಷವಿರುವ ಮಡಕೆಯಂತೆ ನಂಬಿಕೆಗೆ ಅರ್ಹನಲ್ಲ.
-ಪ್ರಬಂಧ ಚಿಂತಾಮಣಿ

★ ಇನ್ನೊಬ್ಬರ ದೋಷವನ್ನು ಹುಡುಕುವುದರಲ್ಲಿ ಮನಸ್ಸು, ಇನ್ನೊಬ್ಬರ ಬಗ್ಗೆ ಕೆಟ್ಟದ್ದನ್ನೇ ಕೇಳುವುದರಲ್ಲಿ ಕಿವಿ, ಇನ್ನೊಬ್ಬರಿಗೆ ಮರ್ಮಭೇದಕವಾಗುವ ಮಾತು– ಈ ಮೂರನ್ನೂ ದುರ್ಜನರಿಗಾಗಿ ಬ್ರಹ್ಮನು ಸೃಷ್ಟಿಸಿದ್ದಾನೆ.
-ಕಲಿ ವಿಡಂಬನ

★ ದುರ್ಜನರ ಸ್ನೇಹವನ್ನು ಬೆಳೆಸಿದ ಮನುಷ್ಯನು ಒಂದು ವೇಳೆ ನಾಶವಾಗದಿದ್ದರೂ, ಸಂಕಟದಲ್ಲಾದರೂ ಸಿಕ್ಕಿಕೊಳ್ಳುತ್ತಾನೆ. ಹತ್ತಿರದಲ್ಲಿದ್ದವರನ್ನು ಬೆಂಕಿ ಸುಡದಿದ್ದರೂ ಕಾಯಿಸುತ್ತದೆ– ಅಂದರೆ ನೋಯಿಸುತ್ತದೆ.
-ಹರಿಹರ

★ ಕೊಳೆಯಾದ ಕನ್ನಡಿಯಲ್ಲಿ ರೂಪವನ್ನು ನೋಡಿಕೊಳ್ಳಲು ಆಗುವುದಿಲ್ಲ. ಹಾಗೆಯೇ ಮನಸ್ಸು ಪಕ್ವವಾಗದಿದ್ದರೆ ಆತ್ಮಜ್ಞಾನ ಉಂಟಾಗುವುದಿಲ್ಲ.
-ಯಾಜ್ಞವಲ್ಕ್ಯ

★ ಯಾರಿಗೂ ಏನನ್ನೂ ಕೊಡದೆ, ಕೊಡಬಹುದಾದ ಶಕ್ತಿಯನ್ನು ಗಳಿಸಿಕೊಳ್ಳುವುದೇ ಜನರಲ್ಲಿ ಗೌರವ ಸಂಪಾದಿಸುವ ಖಚಿತ ಮಾರ್ಗ.
-ಆಲಿವರ್ ಗೋಲ್ಡ್‌ಸ್ಮಿತ್

★ ಒಬ್ಬ ಹೆಂಗಸಿನೊಡನೆ ದೀರ್ಘ ಕಾಲ ಜೀವಿಸುವ ಗಂಡಸು, ಜೀವನವನ್ನು ಅವಳ ದೃಷ್ಟಿಯಿಂದ ನೋಡಲು ಕಲಿಯುತ್ತಾನೆ. ಇದನ್ನು ಮಾಡದವನು ಒಕ್ಕಣ್ಣಿನವನೇ.
-ಜೆ.ಬಿ.ಎಸ್.ಹಾಲ್ಡೇನ್

★ ಗಂಡನು ಲೋಕಕ್ಕೆ ಕೆಟ್ಟವನಾಗದ ಹಾಗೆ ನೋಡಿಕೊಳ್ಳೋದು ಹೆಂಡತಿ ಧರ್ಮ.
-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಮನುಷ್ಯನ ದೊಡ್ಡತನ, ಕುಬ್ಜ ಮನಸ್ಸುಗಳಿಗೆ ಅರ್ಥವಾಗುವುದಿಲ್ಲ.
-ಅನುಭವಾಮೃತ

★ ಹೆಂಡತಿ ಗಂಡನನ್ನು ಪ್ರೀತಿಸಿದರೆ ಮುಗಿಯಿತೆ? ಗಂಡನೂ ಹೆಂಡತಿಯನ್ನು ಪ್ರೀತಿಸಬೇಕು. ಇಬ್ಬರೂ ಮಕ್ಕಳನ್ನು ಪ್ರೀತಿಸಬೇಕು.
-ಎಲ್.ಬಸವರಾಜು

★ ಗುಲಾಮನಾಗಲು ನನಗೆ ಇಷ್ಟವಿಲ್ಲ, ಹಾಗೆಯೇ ಯಜಮಾನನಾಗಲೂ ಇಷ್ಟವಿಲ್ಲ.
-ಅಬ್ರಾಹಂ ಲಿಂಕನ್

★ ಹೆಂಡತಿ ಮಾತನಾಡುವಂತೆ ಮಾಡುವ ಔಷಧಿಗಳು ನಮ್ಮಲ್ಲಿವೆ; ಅವಳು ಮಾತನಾಡದಂತೆ ಮಾಡುವ ಯಾವ ಔಷಧವೂ ಇಲ್ಲ.
-ಅನತೋಲ್ ಫ್ರಾನ್ಸ್

★ ಗುಣಶಾಲಿಯಿಂದ ಗುಣಶಾಲಿಯೇ ಹುಟ್ಟುವನೆಂಬ ನಿಯಮವೇನೂ ಇಲ್ಲ. ದಗ್ಧವಾದ ಶ್ರೀಗಂಧದಿಂದ ಹುಟ್ಟುವ ಬೂದಿ ಸುಗಂಧಿಯಾಗಿರುವುದಿಲ್ಲ.
-ದೃಷ್ಟಾಂತಕಲಿಕಾ

★ ಸೂರ್ಯನು ಬೆಳಕನ್ನು ಕೊಡುತ್ತಾನೆ, ಅವನನ್ನು ತೋರಿಸಲು ಬೆಳಕು ಬೇಡ. ಭೂಮಿಯು ಎಲ್ಲರನ್ನೂ ಧರಿಸುತ್ತದೆ, ಅದನ್ನು ಯಾರೂ ಹೊತ್ತಿಲ್ಲ. ಹಾಗೆಯೇ ಸತ್ಪುರುಷರು ಪ್ರತ್ಯುಪಕಾರ ಬಯಸುವುದಿಲ್ಲ.
-ಸುಭಾಷಿತ ರತ್ನ

★ ಪ್ರಪಂಚವೇ ಯಶಸ್ವಿ ಗುರು; ಆದರೆ ಅದರ ಗುರುದಕ್ಷಿಣೆ ಬಹಳ ಹೆಚ್ಚು.
-ಫಿನ್‌ಲೆಂಡ್ ಗಾದೆ